ಭಾರತ ಮತ ಮಹಾ ಸಮರ

ಸಮಾಚಾರ ಸಣ್ಣದಲ್ಲ

ಪ್ರಜಾಪ್ರಭುತ್ವ ಹಬ್ಬ: ಗೂಗಲ್ ವಿಶೇಷ ಸಂಭ್ರಮ

ದೆಹಲಿ: ಲೋಕಸಭಾ ಚುನಾವಣೆಯ ಎರಡನೇ ಹಂತದಲ್ಲಿ ಶುಕ್ರವಾರ ಕರ್ನಾಟಕದ 14 ಸೇರಿದಂತೆ ದೇಶದ 88 ಕ್ಷೇತ್ರಗಳಿಗೆ ಮತದಾನ ನಡೆದಿದೆ. ಇದೇ ವೇಳೆ ಸರ್ಚ್ ಎಂಜಿನ್ ಗೂಗಲ್ ವಿಶೇಷ ಡೂಡಲ್ ಮೂಲಕ ಪ್ರಜಾಪ್ರಭುತ್ವದ ಹಬ್ಬವನ್ನು ಸಂಭ್ರಮಿಸಿದೆ. ಗೂಗಲ್ ವಿಶೇಷ ಸಂದರ್ಭಗಳಲ್ಲಿ ತನ್ನ ಡೂಡಲ್ ಬದಲಿಸುತ್ತದೆ. ಶುಕ್ರವಾರ ಕೂಡ ತನ್ನ ಡೂಡಲ್ ಬದಲಿಸಿ, ಶಾಯಿ ಹಚ್ಚಿದ ತೋರು ಬೆರಳಿನ ಚಿತ್ರ ಹಂಚಿಕೊಂಡಿದೆ. ಕೇರಳದ ಎಲ್ಲ 20 ಕ್ಷೇತ್ರ, ರಾಜಸ್ಥಾನದ 13, ಮಹಾರಾಷ್ಟ್ರ ಮತ್ತು ಉ.ಪ್ರ ದೇಶದ ತಲಾ 8, ಮಧ್ಯಪ್ರದೇಶದ 7, ಬಿಹಾರ ಮತ್ತು ಅಸ್ಸಾಂನ ತಲಾ 5, ಛತ್ತೀಸಗಡ ಮತ್ತು ಪಶ್ಚಿಮ ಬಂಗಾ ಳದ ತಲಾ 3 ಹಾಗೂ ಮಣಿಪುರ, ತ್ರಿಪುರಾ, ಜಮ್ಮು ಮತ್ತು ಕಾಶ್ಮೀರದ ತಲಾ 1 ಕ್ಷೇತ್ರಗಳಲ್ಲಿ ಮತದಾನವಾಗಿದೆ.

ಚುನಾವಣಾ ಕರ್ತವ್ಯ ಯೋಧ ಆತ್ಮಹತ್ಯೆ

ಗರಿಯಾಬಂದ್: ಛತ್ತೀಸ್‌ಗಢದ ಗರಿಯಾಬಂದ್ ಜಿಲ್ಲೆಯಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿದ್ದ ಮಧ್ಯಪ್ರದೇಶ ವಿಶೇಷ ಸಶಸ್ತ್ರ ಪಡೆಯ ಯೋಧ ಸರ್ವಿಸ್ ರೈಫಲ್‌ನಿಂದ ಶುಕ್ರವಾರ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗರಿಯಾಬಂದ್ ಮಹಾಸಮುಂಡ್ ಲೋಕಸಭಾ ಕ್ಷೇತ್ರದಲ್ಲಿ 2ನೇ ಹಂತದ ಮತದಾನ ನಡೆಯುತ್ತಿರುವ ಪಿಪಾರ್ಚೆಡಿ ಪೊಲೀಸ್ ಠಾಣಾ ವ್ಯಾಪ್ತಿಯ ಕುಡೆದದಾರ್ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಬೆಳಗ್ಗೆ 9.30 ರಲ್ಲಿ ಘಟನೆ ನಡೆದಿದೆ. ಹೆಡ್ ಕಾನ್‌ಸ್ಟೆಬಲ್ ಜಿಯಾಲಾಲ್ ಪವಾರ್ ಶಾಲೆಯ ಕೊಠಡಿಯೊಂದಕ್ಕೆ ತೆರಳಿ ಸರ್ವಿಸ್ ರೈಫಲ್‌ನಿಂದ ಗುಂಡು ಹಾರಿಸಿಕೊಂಡಿದ್ದಾರೆ. ಪವಾರ್ ಅವರು ಮಧ್ಯಪ್ರದೇಶದ ವಿಶೇಷ ಸಶಸ್ತ್ರ ಪಡೆಯ ಬೆಟಾಲಿಯನ್ ನಂ.34 ಗೆ ಸೇರಿದವರು. ಮಾಹಿತಿ ತಿಳಿದ ಕೂಡಲೇ ಪೊಲೀಸ್ ತಂಡ ಸ್ಥಳಕ್ಕೆ ಆಗಮಿಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದೆ. ಸ್ಥಳದಲ್ಲಿ ಯಾವುದೇ ಡೆತ್ ನೋಟ್ ಪತ್ತೆಯಾಗಿಲ್ಲ, ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಿಜೆಪಿ ಏಜೆಂಟ್ ಮತಗಟ್ಟೆ ಸಾವು

ಸಿಲಿಚಾರ: ಅಸ್ಸಾಂ ರಾಜ್ಯದ ಮತಗಟ್ಟೆಯೊಂದರಲ್ಲಿ ಬಿಜೆಪಿ ಪೊಲಿಂಗ್ ಏಜೆಂಟ್ ಹಠಾತ್ ಅಸ್ವಸ್ಥಗೊಂಡು ನಿಧನರಾದರು. ಮೃತರನ್ನು ಫಾರುಕ್ ಹುಸೇನ್ ಲಷ್ಕರ್ ಎಂದು ಗುರುತಿಸಲಾಗಿದೆ. ರಾಮನಾಥಪುರ ಪೊಲೀಸ್ ಠಾಣೆಯ ಜಲನಚೊರ ಪ್ರದೇಶದ ಮತಗಟ್ಟೆಯಲ್ಲಿ ಶುಕ್ರವಾರ ಬೆಳಗ್ಗೆ ಬಿಜೆಪಿ ಪೊಲಿಂಗ್ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ ಫಾರುಕ್, ಹಠಾತ್ತಾಗಿ ಕುಸಿದು ಬಿದ್ದರು. ತಕ್ಷಣ ಪ್ರಥಮ ಚಿಕಿತ್ಸೆ ಕೊಡಿಸಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಪ್ರಯೋಜನವಾಗಿಲ್ಲ, ಅಷ್ಟರಲ್ಲಿ ಅವರು ಕೊನೆಯುಸಿರೆಳೆದಿದ್ದರು. ಫಾರುಕ್, ಗ್ರಾಮ ಸುರಕ್ಷತ ಪಡೆಯ ಮುಖ್ಯಸ್ಥರೂ ಆಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮಹಾರಾಷ್ಟ್ರ: ಅಘಾಡಿಯಲ್ಲಿ ರಾಡಿ

ಮುಂಬೈ: ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷ ಮತ್ತು ಮಾಜಿ ಸಚಿವ ಮೊಹಮ್ಮದ್ ಆರಿಫ್ ನಸೀಮ್ ಖಾನ್ ಅವರು ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿದ್ದು, ಮಹಾ ವಿಕಾಸ್ ಆಘಾಡಿ (ಎಂವಿಎ) ಮೈತ್ರಿಕೂಟದಲ್ಲಿ ಬಿಕ್ಕಟ್ಟಿಗೆ ಕಾರಣವಾಗಿದೆ. ಎಂವಿಎಯು ಲೋಕಸಭಾ ಚುನಾವಣೆಯಲ್ಲಿ ಮುಸ್ಲಿಮ್ ಅಭ್ಯರ್ಥಿಯನ್ನು ಕಣಕ್ಕಿಳಿಸದೇ ಇರುವುದಕ್ಕೆ ಅಸಮಾಧಾನ ಹೊರಹಾಕಿರುವ ಆರಿಫ್ ಖಾನ್, ಈ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿದ್ದಾರೆ. ಮಹಾರಾಷ್ಟ್ರದ 48 ಲೋಕಸಭಾ ಕ್ಷೇತ್ರಗಳಲ್ಲಿ ಎಂವಿಎಯು ಒಬ್ಬನೇ ಒಬ್ಬ ಮುಸ್ಲಿಮ್ ಅಭ್ಯರ್ಥಿಗೆ ಟಿಕೆಟ್ ನೀಡಿಲ್ಲ. ಕಾಂಗ್ರೆಸ್ ಪಕ್ಷವು ಕನಿಷ್ಠ ಒಬ್ಬ ಮುಸ್ಲಿಮ್ ಅಭ್ಯರ್ಥಿಯನ್ನು ಕಣಕ್ಕಿಳಿಸಬಹುದು ಎಂಬುದು ಮಹಾರಾಷ್ಟ್ರದ ವಿವಿಧ ಮುಸ್ಲಿಮ್ ಸಂಘಟನೆಗಳ ಮತ್ತು ಮುಖಂಡರ ನಿರೀಕ್ಷೆಯಾಗಿತ್ತು. ಆದರೆ ದುರದೃಷ್ಟವಶಾತ್ ಪಕ್ಷವು ಮುಸ್ಲಿಮ್ ಅಭ್ಯರ್ಥಿಗೆ ಅವಕಾಶ ನೀಡಿಲ್ಲ ಎಂದು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ. ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ನನ್ನ ಹೆಸರು ಸೇರಿಸಿರುವುದಕ್ಕೆ ಧನ್ಯವಾದ ಸಲ್ಲಿಸುತ್ತೇನೆ. ಆದರೆ ನಾನು ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸುವುದಿಲ್ಲ ಎಂದು ಹೇಳಿದ್ದಾರೆ.

5ನೇ ಹಂತಕ್ಕೆ ನಾಮಪತ್ರ ಸಲ್ಲಿಕೆ ಶುರು

ದೆಹಲಿ: ಲೋಕಸಭಾ ಚುನಾವಣೆಯ ಐದನೇ ಹಂತದ ಮತದಾನಕ್ಕೆ (ಮೇ 20) ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ನಿನ್ನೆ (ಏ.26) ಆರಂಭಗೊಂಡಿತು. ಎಂಟು ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರ, ಲಡಾಖ್‌ನ 49 ಕ್ಷೇತ್ರಗಳಿಗೆ ಅಂದು ಮತದಾನ ನಡೆಯಲಿದೆ ಎಂದು ಚುನಾವಣಾ ಆಯೋಗವು ಹೇಳಿಕೆಯಲ್ಲಿ ತಿಳಿಸಿದೆ. ಈ ಕುರಿತು ಅಧಿಸೂಚನೆಯನ್ನೂ ಹೊರಡಿಸಿದೆ. ಐದನೇ ಹಂತದಲ್ಲಿ ಬಿಹಾರ, ಜಾರ್ಖಂಡ್, ಮಹಾರಾಷ್ಟ್ರ, ಒಡಿಶಾ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಮತದಾನ ನಡೆಯಲಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದರು. ನಾಮಪತ್ರ ಸಲ್ಲಿಸಲು ಮೇ 3 ಕೊನೆಯ ದಿನವಾಗಿದೆ. ಮೇ 4ರಂದು ಪರಿಶೀಲನೆ ನಡೆಯಲಿದೆ ಮತ್ತು ನಾಮಪತ್ರ ಹಿಂಪಡೆಯಲು ಮೇ 6 ಕೊನೆಯ ದಿನಾಂಕವಾಗಿದೆ ಎಂದು ವಿವರಿಸಿದರು.

ಎರಡನೇ ಹಂತದ ಮತದಾನ: ಶೇ.60ಕ್ಕೆ ಸಮಾಪ್ತಿ

ತ್ರಿಪುರ ಗರಿಷ್ಠ ಶೇ. 78 ರಷ್ಟು ಮತದಾನ | 2 – 3ನೇ ಸ್ಥಾನದಲ್ಲಿ ಛತ್ತೀಸಗಡ, ಪಶ್ಚಿಮ ಬಂಗಾಳ

ದೆಹಲಿ: ಪ್ರಸಕ್ತ ಲೋಕಸಭಾ ಚುನಾವಣೆಯ 2 ನೇ ಹಂತದ ಮತದಾನ ಶುಕ್ರವಾರ ಶಾಂತಿಯುತವಾಗಿ ನಡೆದಿದೆ. ಅಂದಾಜು ಶೇ. 60 ಕ್ಕಿಂತ ಅಧಿಕ ಮತದಾನ ಆಗಿದೆ ಎಂದು ಆಯೋಗ ತಿಳಿಸಿದೆ.

ತ್ರಿಪುರ ರಾಜ್ಯದಲ್ಲಿ ಗರಿಷ್ಠ ಪ್ರಮಾಣದ ಮತದಾನ ಆಗಿದ್ದರೆ, 2 ಮತ್ತು 3 ನೇ ಸ್ಥಾನದಲ್ಲಿ ಕ್ರಮವಾಗಿ ಛತ್ತೀಸಗಡ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಇವೆ. ದೇಶದ 13 ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಒಟ್ಟು 88 ಲೋಕಸಭಾ ಕ್ಷೇತ್ರಗಳಲ್ಲಿ ಶುಕ್ರವಾರ ಮತದಾನ ನಡೆದಿದೆ.

ತ್ರಿಪುರ ರಾಜ್ಯದಲ್ಲಿನ ಏಕೈಕ ಲೋಕಸಭಾ ಕ್ಷೇತ್ರದಲ್ಲಿ ಶುಕ್ರವಾರ ಚುನಾವಣೆ ನಡೆದಿದ್ದು, ಶೇ.77.93 ರಷ್ಟು ಗರಿಷ್ಠ ಮತದಾನ ಆಗಿದೆ. ಛತ್ತೀಸಗಡ ದಲ್ಲಿ ಶೇ. 72.13 ಮತ್ತು ಪಶ್ಚಿಮ ಬಂಗಾಳ ದಲ್ಲಿ ಶೇ. 71.84 ರಷ್ಟು ಮತದಾನ ನಡೆದಿದೆ.

ಎರಡು ತಿಂಗಳಿಗೂ ಅಧಿಕ ಸಮಯ ಜನಾಂಗೀಯ ಸಂಘರ್ಷಕ್ಕೆ ಒಳಗಾಗಿ ಬಸವಳಿದ ಮಣಿಪುರ ರಾಜ್ಯ ದಲ್ಲಿಯು ಗರಿಷ್ಠ ಪ್ರಮಾಣದ ಮತದಾನ ಆಗಿದೆ. ಮಣಿಪುರ ದಲ್ಲಿ 13 ಮತ ಕೇಂದ್ರಗಳಲ್ಲಿ ಶೇ. 76.06 ರಷ್ಟು ಮತದಾನ ನಡೆದಿದೆ. ಅಸ್ಸಾಂ ರಾಜ್ಯದಲ್ಲೂ ಶೇ.70.66 ರಷ್ಟು ಮತದಾನ ಆಗಿದೆ.

ಮೊದಲ ಹಂತದಲ್ಲಿ ಕಡಿಮೆ ಮತದಾನ ಕಂಡಿದ್ದ ಬಿಹಾರ ರಾಜ್ಯ 2 ನೇ ಹಂತದ ಚುನಾವಣೆಯಲ್ಲಿ ಸುಧಾರಣೆ ಕಂಡಿದೆ. ಬಿಹಾರದಲ್ಲಿ ಶುಕ್ರವಾರ ಶೇ. 53.03 ರಷ್ಟು ಮತದಾನ ನಡೆದಿದೆ.

ಉತ್ತರಪ್ರದೇಶದಲ್ಲಿ 8 ಲೋಕಸಭಾ ಕ್ಷೇತ್ರ ಗಳಿಗೆ ಶುಕ್ರವಾರ ನಡೆದ ಮತದಾನದಲ್ಲಿ ಶೇ.52.74 ರಷ್ಟು ಮತದಾನ ನಡೆದಿದೆ.

ರಾಜಸ್ಥಾನದಲ್ಲಿ 13 ಲೋಕಸಭಾ ಕ್ಷೇತ್ರ ಗಳಲ್ಲಿ ಶೇ. 59.19 ರಷ್ಟು ಮತದಾನ ನಡೆದಿದೆ.

ಮಧ್ಯಪ್ರದೇಶದ 6 ಲೋಕಸಭಾ ಕ್ಷೇತ್ರಗಳಲ್ಲಿ ಶೇ. 54.83 ರಷ್ಟು ಮತ ಹಕ್ಕು ಚಲಾವಣೆ ಆಗಿದೆ.

ತ್ರಿಪುರದಲ್ಲಿ ಬ್ರು ವಲಸೆಗಾರರ ಪ್ರಥಮ ಮತದಾನದ ಖುಷಿ

ಅಗರತಲ: ಬ್ರು ವಲಸೆಗಾರ ಸಮುದಾಯದ 32 ಸಾವಿರ ಜನರು ತ್ರಿಪುರ ರಾಜ್ಯದಲ್ಲಿ ಆಶ್ರಯ ಪಡೆದ 27 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಮತದಾನ ಮಾಡಿದರು. 27 ವರ್ಷಗಳ ಹಿಂದೆ ಮಿಜೋರಾಮ್‌ನಲ್ಲಿ ಜನಾಂಗೀಯ ಘರ್ಷಣೆ ನಡೆದಾಗ ರಾಜ್ಯವನ್ನು ತೊರೆದು ತ್ರಿಪುರ ರಾಜ್ಯಕ್ಕೆ ಬಂದು ಆಶ್ರಯ ಪಡೆದ ಬ್ರು ವಲಸೆಗಾರ ಸಮುದಾಯದ ಜನರ ಬದುಕು ದುಸ್ತರವಾಗಿತ್ತು. ಬದುಕುವುದೇ ಕಡು ಕಷ್ಟವಾಗಿದ್ದು, ಮತದಾನದ ಹಕ್ಕು ಕೇಳುವುದೇ ದೂರದ ಮಾತಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಸರಕಾರ ಮುಂದಾಗಿ ತ್ರಿಪುರ ಮತ್ತು ಮಿಜೋರಾಮ್ ರಾಜ್ಯಗಳ ಸರಕಾರಗಳು ಹಾಗೂ ಬ್ರು ವಲಸೆಗಾರರು ಕೂತು ಚರ್ಚೆ ನಡೆಸಿ ಒಪ್ಪಂದ ಕ್ಕೆ ಬಂದ ಬಳಿಕ ಬ್ರು ಸಮುದಾಯದ ಜನರು ಈಗ ತ್ರಿಪುರ ರಾಜ್ಯದಲ್ಲಿ ಆ ರಾಜ್ಯದ ಪ್ರಜೆಗಳಾಗಿ ಮತದಾನ ಮಾಡಲು ಅವಕಾಶ ಆಗಿದೆ.

ಪ್ರಜೆಗಳ ಹಬ್ಬದ ಸಂಭ್ರಮ

ದೆಹಲಿ: ಲೋಕಸಭೆಗೆ ಶುಕ್ರವಾರ ನಡೆದ ಎರಡನೇ ಹಂತದ ಚುನಾವಣೆಯಲ್ಲಿ ಕರ್ನಾಟಕದ 14 ಸೇರಿ ವಿವಿಧ ರಾಜ್ಯಗಳ 88 ಕ್ಷೇತ್ರಗಳಲ್ಲಿ ನಡೆದ ಮತದಾನದ ವೇಳೆ ಪ್ರಜಾಪ್ರಭುತ್ವವನ್ನು ಸಂಭ್ರಮಿಸುವ ವಿವಿಧ ಚಿತ್ರಣಗಳು ಅನಾವರಣಗೊಂಡವು. ಕುಟುಂಬ ಮೂರು ತಲೆಮಾರುಗಳ ಮತದಾರು ಒಂದೇ ಸಾಲಿನಲ್ಲಿ ನಿಂತ ಮತ ಹಕ್ಕು ಚಲಾಯಿಸಿದರು. ಎತ್ತಿನಗಾಡಿ, ವ್ಹೀಲ್ ಚೇರ್‌ಗಳಲ್ಲೂ ಮತಗಟ್ಟೆಗೆ ಬಂದರು. ಮತ ಚಲಾಯಿಸಿದ ಕುರುಹಾಗಿ ಕಪ್ಪು ಶಾಯಿ ಹಾಕಿದ್ದ ಬೆರಳನ್ನು ಹೆಮ್ಮೆಯಿಂದ ಪ್ರದರ್ಶಿಸಿದರು.

- ಛತ್ತೀಸಗಢದ ಕಾಂಕೇರ್ ಕ್ಷೇತ್ರ ವ್ಯಾಪ್ತಿ ಸಿವ್ನಿ ಗ್ರಾಮದಲ್ಲಿ ಮತಗಟ್ಟೆಯನ್ನು ವಿವಾಹ ಮಂಟಪದಂತೆ ಸಾಂಪ್ರದಾಯಿಕ ಶೈಲಿಯಲ್ಲಿ ಅಲಂಕರಿಸಲಾಗಿತ್ತು. ಹಲವು ವಧು-ವರರು ಸಾಂಪ್ರದಾಯಿಕ ಉಡುಗೆಯಲ್ಲಿಯೇ ಮತಗಟ್ಟೆಗೆ ಬಂದು ಹಕ್ಕು ಚಲಾಯಿಸಿದರು.
- ಉತ್ತರ ಪ್ರದೇಶದ ಬುಳಂದಶಹರ್‌ನಲ್ಲಿ ಮಹಿಳಾ ಮತದಾರರದು ಮತ್ತೊಂದು ರೀತಿ ಸಂಭ್ರಮ. ಡೋಲು (ಢೋಲಕ್) ಬಾರಿಸುತ್ತಾ, ಹಾಡು ಹೇಳುತ್ತಾ ಅವರು ಎತ್ತಿನಗಾಡಿಗಳಲ್ಲಿ ಮತಗಟ್ಟೆಗೆ ಬಂದರು.
- ರಾಜಸ್ಥಾನದ ಕೋಟಾ-ಬುಂದಿ ಕ್ಷೇತ್ರದ ಗುಂಜಾರಾ ಮತಗಟ್ಟೆಯಲ್ಲಿ 108 ವರ್ಷ ವಯಸ್ಸಿನ ಭುರಿ ಭಾಯಿ ಹಕ್ಕು ಚಲಾಯಿಸಿದರು. ಅವರನ್ನು ಕುಟುಂಬ ಸದಸ್ಯರು ವ್ಹೀಲ್ ಚೇರ್‌ನಲ್ಲಿ ಮತಗಟ್ಟೆ ಕರೆತಂದರು. ಅಂತೆಯೇ ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಮತಗಟ್ಟೆಯಲ್ಲಿ 102 ವರ್ಷ ವಯಸ್ಸಿನ ಕರಂದಿನ್ ಮತ ಚಲಾಯಿಸಿದರು.
- ರಾಜಸ್ಥಾನದ ಜಲೋರ್ ಜಿಲ್ಲೆಯಲ್ಲಿ ಸನ್ಕಂದ್ ಮತಗಟ್ಟೆಯಲ್ಲಿ ಮೂರು ತಲೆಮಾರಿನವರಿಗೆ ಒಟ್ಟಿಗೆ ಮತ ಚಲಾಯಿಸುವ ಸಡಗರ. ವ್ಯಕ್ತಿ, ಅವರ ಪುತ್ರ, ಇಬ್ಬರು ಮೊಮ್ಮಗಳ ಜೊತೆಗೆ ಬಂದು ಮತ ಚಲಾಯಿಸಿ, ಸಂಭ್ರಮಕ್ಕೆ ಸಾಕ್ಷಿಯಾಗಿ ಸೆಲ್ಫಿ ತೆಗೆದುಕೊಂಡರು.
- ಆಂಧ್ರಪ್ರದೇಶದ ಅಮರಾವತಿಯಲ್ಲಿ ಬಿಜೆಪಿ ಅಭ್ಯರ್ಥಿ ನವನೀತ ರಾಣಾ ಅವರು ತಮ್ಮ ಪತಿ, ಶಾಸಕ ರವಿ ರಾಣಾ ಅವರೊಂದಿಗೆ ಮತ ಚಲಾಯಿಸಲು ಮೋಟರ್‌ಬೈಕ್‌ನಲ್ಲಿ ಬಂದರು.

ಮುಸ್ಲಿಮರಿಗೆ ಸಂಪತ್ತು; ಡಾ.ಸಿಂಗ್ ಹಳೆ ವಿಡಿಯೋ ಹಂಚಿಕೊಂಡ ಬಿಜೆಪಿ

ವಿಶೇಷ ಸವಲತ್ತಿಗೆ ಮುಸ್ಲಿಮರು ಹೆಚ್ಚು ಅರ್ಹರು | ಕಾಂಗ್ರೆಸ್‌ನಲ್ಲಿ ತಳಮಳ; ಮತ್ತೊಂದು ಸ್ಪಷ್ಟನೆ ನೀಡಿ ವಿವಾದ ತಣಿಸಲು ಯತ್ನ

ದೆಹಲಿ: ಕಾಂಗ್ರೆಸ್ – ಬಿಜೆಪಿ ವಾಕ್ಸಮರಕ್ಕೆ ಕಾರಣವಾಗಿರುವ ಕಾಂಗ್ರೆಸ್ ಪ್ರಣಾಳಿಕೆ ಮತ್ತು ಮುಸ್ಲಿಮರಿಗೆ ದೇಶದ ಸಂಪತ್ತು ಹಂಚಿಕೆ ವಿಚಾರಕ್ಕೆ ಸಂಬಂಧಿಸಿ ಬಿಜೆಪಿ ಶುಕ್ರವಾರ ಮತ್ತೊಂದು ಬಾರಿ ತಿರುಗೇಟು ನೀಡಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಣಾಳಿಕೆ ಸ್ಪಷ್ಟನೆ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದ ಬೆನ್ನಲ್ಲೇ ಬಿಜೆಪಿ, ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ಹಳೆಯ ವಿಡಿಯೋವನ್ನು ಹಂಚಿಕೊಂಡು ಕೈ ಪಾಳಯಕ್ಕೆ ಭಾರೀ ಪೆಟ್ಟು ನೀಡಿದೆ.

ಅಲ್ಪಸಂಖ್ಯಾತ ಮುಸಲ್ಮಾನರು ವಿಶೇಷ ಸವಲತ್ತು ಪಡೆಯಲು ದೇಶದಲ್ಲಿನ ಇತರರಿಗಿಂತ ಹೆಚ್ಚು ಅರ್ಹರು ಎಂದು ಡಾ.ಮನಮೋಹನ್ ಸಿಂಗ್ ಹೇಳಿದ್ದಾರೆನ್ನಲಾದ 2009ರ ವಿಡಿಯೋವನ್ನು ಬಿಜೆಪಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದೆ.

ಮುಸ್ಲಿಂ ಅಲ್ಪಸಂಖ್ಯಾತರು ಬಡವರಾಗಿದ್ದರೆ ಅವರಿಗೆ ಮೊದಲ ಆದ್ಯತೆ ಕೊಟ್ಟು ಸವಲತ್ತುಗಳನ್ನು ಕೊಡಬೇಕು. ರಾಷ್ಟ್ರೀಯ ಸಂಪತ್ತಿನ ಹಂಚಿಕೆ ವಿಚಾರ ಬಂದಾಗ ಮುಸ್ಲಿಮರಿಗೆ ಮೊದಲ ಆದ್ಯತೆ ಕೊಡಬೇಕು. ರಾಷ್ಟ್ರೀಯ ಸಂಪತ್ತಿನಲ್ಲಿ ಮೊದಲ ಹಕ್ಕು ಮುಸ್ಲಿಮರದ್ದು ಎಂದು ಮನಮೋಹನ್ ಸಿಂಗ್ ಹೇಳಿದ್ದಾರೆ. ಅದು ವಿಡಿಯೋದಲ್ಲಿ ದಾಖಲಾಗಿದೆ ಎಂದು ಬಿಜೆಪಿ ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದೆ.

ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ದೇಶದ ಸಂಪತ್ತಿನಲ್ಲಿ ಮುಸ್ಲಿಮರಿಗೇ ಮೊದಲ ಅಧಿಕಾರ ಇತ್ತು. ಕಾಂಗ್ರೆಸ್ಸವರು ದೇಶದ ಸಂಪತ್ತನ್ನು ಒಟ್ಟುಗೂಡಿಸಿ ಅಕ್ರಮ ವಲಸಿಗರು, ಹೆಚ್ಚು ಮಕ್ಕಳನ್ನು ಹೊಂದಿರುವ ಸಮುದಾಯಕ್ಕೆ ನೀಡಲಿದ್ದಾರೆ. ನಿಮ್ಮ ಶ್ರಮದ ಹಣವನ್ನು ಅಕ್ರಮ ವಲಸಿಗರಿಗೆ ನೀಡಬೇಕೆ? ನೀವು ಇದನ್ನು ಒಪ್ಪುವಿರೇ? ಕಾಂಗ್ರೆಸ್ ಪ್ರಣಾಳಿಕೆ ಇದನ್ನು ಹೇಳುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ರಾಜಸ್ಥಾನದಲ್ಲಿ ಮಾಡಿದ ಚುನಾವಣಾ ಪ್ರಚಾರ ಭಾಷಣದಲ್ಲಿ ಹೇಳಿದ್ದರು.

ಈಗ ಬಿಜೆಪಿ ನಾಯಕರು ಡಾ. ಮನಮೋಹನ್ ಸಿಂಗ್ ವಿಡಿಯೋ ಮುಂದಿಟ್ಟುಕೊಂಡು ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಮುಸ್ಲಿಮರಿಗೆ ಕಾಂಗ್ರೆಸ್ ಸಂಪತ್ತಿನ ಹಂಚಿಕೆ ಮಾಡುತ್ತದೆ ಎಂದು ಪ್ರಧಾನಿ ಮೋದಿ ಅವರು ನೀಡಿದ ಹೇಳಿಕೆಗೆ ಸ್ಪಷ್ಟನೆ ನೀಡುತ್ತಿರುವ ಕಾಂಗ್ರೆಸ್, ಅದರ ನಿಜವಾದ ಉದ್ದೇಶ ಏನಿದೆ ಎಂಬುದಕ್ಕೆ ಡಾ. ಸಿಂಗ್ ವಿಡಿಯೋ ಸಾಕ್ಷಿ. ಎಲ್ಲಾ ವಿಚಾರದಲ್ಲಿ ಕಾಂಗ್ರೆಸ್ ಮುಸ್ಲಿಂ ಓಲೈಕೆ ಮನಸ್ಥಿತಿ ಹೊಂದಿರುವುದು ಇದರಿಂದ ಸ್ಪಷ್ಟವಾಗಿದೆ. ಮುಸ್ಲಿಮರಿಗೆ ಮೊದಲು ಮೀಸಲಾತಿ ಸೌಲಭ್ಯ ಕಲ್ಪಿಸಿದ ಕಾಂಗ್ರೆಸ್, ಈಗ ದೇಶದ ಸಂಪತ್ತು ಹಂಚಿಕೆಯತ್ತ ಗಮನ ಕೇಂದ್ರಿಕರಿಸಿದೆ' ಎಂದು ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದೆ.

ಮತ್ತೆ ಕಾಂಗ್ರೆಸ್ ಸ್ಪಷ್ಟನೆ

ತನ್ನ ಚುನಾವಣಾ ಪ್ರಣಾಳಿಕೆ ಮತ್ತು ಡಾ. ಮನಮೋಹನ್ ಸಿಂಗ್ ವಿಡಿಯೋ ವಿಚಾರ ದೊಡ್ಡ ರಾಜಕೀಯ ತಿರುವು ಪಡೆದುಕೊಳ್ಳುತ್ತಿದೆ ಎಂಬುದು ಅರಿವಾಗುತ್ತಿದ್ದಂತೆ ಕಾಂಗ್ರೆಸ್, ತನ್ನ ಪ್ರಣಾಳಿಕೆಯಲ್ಲಿ ಅಂತಹ ಯಾವುದೇ ಭರವಸೆ ನೀಡಿಲ್ಲ ಎಂದು ಸ್ಪಷ್ಟನೆ ನೀಡಿದೆ. ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ರಾಷ್ಟ್ರವ್ಯಾಪಿ ಸಾಮಾಜಿಕ-ಆರ್ಥಿಕ ಮತ್ತು ಜಾತಿ ಸಮೀಕ್ಷೆ ನಡೆಸುವುದಾಗಿ ಪ್ರಣಾಳಿಕೆಯಲ್ಲಿ ಭರವಸೆ ಕೊಟ್ಟಿರುವುದಾಗಿ ಕಾಂಗ್ರೆಸ್ ಹೇಳಿ ಕೊಂಡಿದೆ.

ಸೂರತ್ ಕಾಂಗ್ರೆಸ್ ಅಭ್ಯರ್ಥಿ ವಜಾ

ಅಹಮದಾಬಾದ್: ಸೂರತ್ ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯಾಗಿದ್ದ ನೀಲೇಶ್ ಕುಂಭಾನಿ ಅವರನ್ನು ಗುಜರಾತ್ ಕಾಂಗ್ರೆಸ್ ಘಟಕವು 6 ವರ್ಷಗಳ ಅವಧಿಗೆ ಅಮಾನತು ಮಾಡಿದೆ.

ಕುಂಭಾನಿ ಅವರ ನಾಮಪತ್ರ ಕಳೆದ ಭಾನುವಾರ ತಿರಸ್ಕೃತಗೊಂಡಿತ್ತು. ಇದರ ಬೆನ್ನಲ್ಲೇ ಕಣದಲ್ಲಿದ್ದ ಇತರ ಎಂಟು ಅಭ್ಯರ್ಥಿ ಗಳು ಹಿಂದೆ ಸರಿದಿದ್ದರು. ಇದರ ಪರಿಣಾಮ ವಾಗಿ ಬಿಜೆಪಿ ಅಭ್ಯರ್ಥಿ ಮುಕೇಶ್ ದಲಾಲ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದರು.

ನಾಮಪತ್ರ ತಿರಸ್ಕೃತಗೊಳ್ಳಲು ಕುಂಭಾನಿ ಅವರ ನಿರ್ಲಕ್ಷ್ಯ ಅಥವಾ ಬಿಜೆಪಿ ಜತೆಗಿನ ಹೊಂದಾಣಿಕೆಯೇ ಕಾರಣ ಎಂಬುದನ್ನು ಮನಗಂಡ ಕಾಂಗ್ರೆಸ್ ಶಿಸ್ತು ಸಮಿತಿಯು ಅವರ ವಿರುದ್ಧ ಕ್ರಮ ಕೈಗೊಂಡಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ನಾಮಪತ್ರ ತಿರಸ್ಕೃತಗೊಂಡ ಬಳಿಕ ನಿಮ್ಮ ವಾದವನ್ನು ಮಂಡಿಸಲು ಸಮಯಾವಕಾಶ ಕೊಟ್ಟಿದ್ದೆವು. ಆದರೆ ಪಕ್ಷದ ಶಿಸ್ತು ಸಮಿತಿ ಮುಂದೆ ಹಾಜರಾಗುವ ಬದಲು, ಯಾರ ಸಂಪರ್ಕಕ್ಕೂ ಸಿಗಲಿಲ್ಲ. ಬಿಜೆಪಿ ಅಭ್ಯರ್ಥಿಯ ಅವಿರೋಧ ಆಯ್ಕೆಗೆ ನೀವು ಹಾದಿಯೊದಗಿಸಿದ್ದೀರಿ. ಈ ಬೆಳವಣಿಗೆಯು ಸೂರತ್‌ನ ಜನರ ಮತದಾನದ ಹಕ್ಕನ್ನು ಕಸಿದುಕೊಂಡಿದೆ. ಜನರು ಹಾಗೂ ಪಕ್ಷದ ಕಾರ್ಯಕರ್ತರು ಕೋಪಗೊಂಡಿದ್ದು, ವಿವಿಧ ರೀತಿಯಲ್ಲಿ ಆಕ್ರೋಶ ಹೊರಹಾಕುತ್ತಿದ್ದಾರೆ. ನಿಮ್ಮನ್ನು ಆರು ವರ್ಷಗಳ ಕಾಲ ಅಮಾನತು ಮಾಡಲು ಪಕ್ಷವು ನಿರ್ಧರಿಸಿದೆ ಎಂದು ಶಿಸ್ತು ಸಮಿತಿಯು ಕುಂಭಾನಿ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದೆ.

ಮತದಾನದ ದಿನ ಎಡಪಕ್ಷಕ್ಕೆ ಮುಜುಗರ

ಕಣ್ಣೂರು/ಆಲಪ್ಪುಳ: ಸಿಪಿಎಂನ ಹಿರಿಯ ಮುಖಂಡ ಇ.ಪಿ. ಜಯರಾಜನ್ ಅವರು ಬಿಜೆಪಿಗೆ ಸೇರಲು ಬಯಸಿದ್ದರು ಎಂಬ ಆರೋಪ ಕೇಳಿ ಬಂದ ಕಾರಣ, ಲೋಕಸಭಾ ಚುನಾವಣೆಯ ಮತದಾನ ದಿನದಂದು ಕೇರಳದ ಆಡಳಿತಾರೂಢ ಪಕ್ಷವು ತೀವ್ರ ಮುಜುಗರಕ್ಕೆ ಒಳಗಾಗಿತ್ತು ಎಂದು ಮೂಲಗಳು ತಿಳಿಸಿವೆ. ಜಯರಾಜನ್ ಅವರನ್ನು ಬಿಜೆಪಿಗೆ ಸೇರಿಸಿಕೊಳ್ಳಲು ಪ್ರಯತ್ನ ನಡೆದಿತ್ತು ಎಂಬುದನ್ನು ಬಿಜೆಪಿ ನಾಯಕಿ ಶೋಭಾ ಸುರೇಂದ್ರನ್ ಅವರು ಎರಡು ದಿನಗಳ ಹಿಂದೆ ಬಹಿರಂಗಪಡಿಸಿದ್ದರು.ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಶಿವ ದೇವರು ಪಾಪಿಯ ಜೊತೆಗೆ ಸೇರಿದರೆ, ಶಿವನೂ ಪಾಪಿಯಾಗುತ್ತಾನೆ ಎಂದು ಹೇಳಿದ್ದಾರೆ. ಜಯರಾಜನ್ ಅವರು ಸದ್ಯ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟದ ಸಂಚಾಲಕರಾಗಿದ್ದಾರೆ.

ತೆಲಂಗಾಣ ಕಣದಲ್ಲಿ ಕೋಟ್ಯಾಧಿಪತಿ ಎಲ್ಲೆಲ್ಲೂ!

ಹೈದರಾಬಾದ್: ತೆಲಂಗಾಣ ರಾಜ್ಯದಲ್ಲಿ ಲೋಕಸಭಾ ಚುನಾವಣೆಯ ಕಣದಲ್ಲಿ ಇರುವವರೆಲ್ಲರೂ ಕೋಟ್ಯಾಧಿಪತಿಗಳೆ ಆಗಿದ್ದಾರೆ. ಅದರಲ್ಲೂ 8 ಮಂದಿ ಶತ ಕೋಟ್ಯಾಧಿಪತಿ ಆಗಿದ್ದಾರೆ.

ಛೇವೆಲ್ಲಾ ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳಲ್ಲಿ ಮೂರು ಪ್ರಮುಖ ಪಕ್ಷಗಳ ಅಭ್ಯರ್ಥಿಗಳತೂ ನೂರಾರು ಕೋಟಿ ರು.ಗೂ ಅಧಿಕ ಆಸ್ತಿವಂತರು.

ಇಡೀ ದೇಶದಲ್ಲಿ ಅತ್ಯಂತ ಸಿರಿವಂತ ಅಭ್ಯರ್ಥಿಗಳಲ್ಲಿ ಒಬ್ಬರಾದ ಬಿಜೆಪಿ ಉಮೇದುವಾರ ಛೇವೆಲ್ಲಾ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ವಿಶ್ವೇಶ್ವರ ರೆಡ್ಡಿ 4568 ಕೋಟಿ ರು. ಆಸ್ತಿ ಹೊಂದಿದ್ದಾರೆ. ಇವರ ಎದುರಾಳಿ ಕಾಂಗ್ರೆಸ್ ನ ರಂಜಿತ್ ರೆಡ್ಡಿ 435.33 ಕೋಟಿ ರು. ಆಸ್ತಿ ಘೋಷಿಸಿಕೊಂಡಿದ್ದಾರೆ. ರಂಜಿತ್ ಕುಟುಂಬದ ಆಸ್ತಿಯು 295 ಕೋಟಿ ರು. ಗಳಷ್ಟಿದೆ. ಇದೇ ಕ್ಷೇತ್ರದ ಬಿ ಆರ್ ಎಸ್ ಪಕ್ಷದ ಅಭ್ಯರ್ಥಿ ಕಸನೀ ಗ್ಯಾನೇಶ್ವರ 228.50 ಕೋಟಿ ರು. ಆಸ್ತಿ ಹೊಂದಿದ್ದಾರೆ.

ಹೈದರಾಬಾದ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಾಧವಿ ಲತಾ 218 ಕೋಟಿ ರು ಮೌಲ್ಯದ ಆಸ್ತಿಯನ್ನು ಹೊಂದಿದ್ದಾರೆ.

ಕಮ್ಮಮ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ನಾಮ ನಾಗೇಶ್ವರ ರಾವ್ 156 ಕೋಟಿ ರು., ಝಹೀರಾಬಾದ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಬಿ. ಪಾಟೀಲ್ 152 ಕೋಟಿ ಆಸ್ತಿಯನ್ನು ಹೊಂದಿದ್ದಾರೆ. ಇದೇ ಕ್ಷೇತ್ರದ ಬಿಆರ್ ಎಸ್ ಉಮೇದುವಾರ ಕಮಿ ಮಲ್ಲೇಶ 145 ಕೋಟಿ ಆಸ್ತಿ ಹೊಂದಿರುವುದಾಗಿ ಘೋಷಣೆ ಮಾಡಿಕೊಂಡಿದ್ದಾರೆ.



ನಿಜಾಮಾಬಾದ್ ಹಾಲಿ ಸಂಸದ, ಬಿಜೆಪಿ ಅಭ್ಯರ್ಥಿ ಅರವಿಂದ್ 110 ಕೋಟಿ ರು. ಆಸ್ತಿ ಹೊಂದಿದ್ದಾರೆ.

ಇವರೆಲ್ಲರ ರಾಜಕೀಯ ಭವಿಷ್ಯ ಮೇ 13 ರಂದು ನಡೆವ ಮತದಾನದಲ್ಲಿ ನಿರ್ಧಾರವಾಗಲಿದೆ.

ಕೈನಿಂದ ಗೋಹತ್ಯೆಗೆ ಅವಕಾಶ: ಯೋಗಿ ಕಿಡಿ

ಲಖನೌ: ಕಾಂಗ್ರೆಸ್ ಪಕ್ಷವು ಅಲ್ಪಸಂಖ್ಯಾತರಿಗೆ ಗೋಮಾಂಸ ತಿನ್ನುವ ಹಕ್ಕನ್ನು ನೀಡಲು ಬಯಸುತ್ತದೆ. ಇದು ಗೋಹತ್ಯೆಗೆ ಅವಕಾಶ ಮಾಡಿಕೊಟ್ಟಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಶುಕ್ರವಾರ ಟೀಕಿಸಿದ್ದಾರೆ. ನಮ್ಮ ಧರ್ಮಗ್ರಂಥಗಳು ಗೋವನ್ನು ತಾಯಿ ಎಂದು ಕರೆದಿವೆ. ಆದರೆ ಅವರು ಗೋವನ್ನು ಕಟುಕರ ಕೈಗೆ ನೀಡಲು ಬಯಸುತ್ತಾರೆ. ನಮ್ಮ ದೇಶ ಇದನ್ನು ಒಪ್ಪಿಕೊಳ್ಳುವುದೇ? ಎಂದು ಆದಿತ್ಯನಾಥ್ ಅವರು ಮೊರಾದಾಬಾದ್ ಜಿಲ್ಲೆಯ ಬಿಲಾರಿಯಲ್ಲಿ ನಡೆದ ರ‍್ಯಾಲಿಯಲ್ಲಿ ಹೇಳಿರುವುದಾಗಿ ಬಿಜೆಪಿ ಪ್ರಕಟಣೆ ತಿಳಿಸಿದೆ. ಅಲ್ಪಸಂಖ್ಯಾತರಿಗೆ ತಮ್ಮ ಇಚ್ಛೆಯ ಆಹಾರವನ್ನು ತಿನ್ನುವ ಸ್ವಾತಂತ್ರ್ಯ ನೀಡಲು ಕಾಂಗ್ರೆಸ್‌ನವರು ಬಯಸುವರು. ಅವರು ಗೋಹತ್ಯೆಗೆ ಅವಕಾಶ ನೀಡುವ ಬಗ್ಗೆ ಮಾತನಾಡುತ್ತಿದ್ದಾರೆ ಎಂಬುದೇ ಅದರ ಅರ್ಥ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಡಾ.ಮನಮೋಹನ್ ಸಿಂಗ್ ವಿಡಿಯೋಗೆ ಏನು ಹೇಳುವಿರಿ?

ಟೀಕೆಗಳಿಗೆ ಪ್ರತ್ಯುತ್ತರ ನೀಡಿದ ಪ್ರಧಾನಿ | ಕಾಂಗ್ರೆಸ್‌ಗೆ ನರೇಂದ್ರ ಮೋದಿ ಪ್ರಶ್ನೆ, ವಾಗ್ದಾಳಿ

ಆರರಿಯ: ಕಾಂಗ್ರೆಸ್ ಪಕ್ಷ ಒಂದೊಮ್ಮೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಮುಸ್ಲಿಂ ಸಮುದಾಯಕ್ಕೆ ದೇಶದ ಸಂಪತ್ತನ್ನು ಹಂಚಿಕೆ ಮಾಡಲಿದೆ. ಈ ವಿಚಾರವನ್ನು ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆ ಯಲ್ಲಿ ತಿಳಿಸಿದೆ ಎಂದು ನಾನು ಹೇಳಿದಾಗ ಪ್ರತಿ ಪಕ್ಷಗಳ ನಾಯಕರು ನನ್ನ ವಿರುದ್ಧ ಮುಗಿ ಬಿದ್ದರು. ಈಗ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರೇ ಈ ವಿಚಾರ ಹೇಳಿರುವ ವಿಡಿಯೋ ಪ್ರಕಟವಾಗಿದೆ ನೋಡಿ ಎಂದು ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಬಿಹಾರದ ಆರರಿಯ ಪಟ್ಟಣದಲ್ಲಿ ಶುಕ್ರವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಇದು ಈಗಿನ ಕಾಂಗ್ರೆಸ್ ನದು ಮಾತ್ರವಲ್ಲ, ಮೊದಲಿನಿಂದಲು ಆ ಪಕ್ಷದ ನಾಯಕರ ಆಲೋಚನೆ ಹೀಗೆಯೇ ಇದೆ. ಮುಸ್ಲಿಂ ಸಮುದಾಯದ ತುಷ್ಟೀಕರಣ ಕಾಂಗ್ರೆಸ್ ನ ರಕ್ತದಲ್ಲೇ ಮಿಳಿತವಾಗಿದೆ ಎಂದು ಮೋದಿ ಮತ್ತೊಂದು ಟೀಕಾಸ್ತ್ರ ಪ್ರಯೋಗಿಸಿದರು.

ಕಳೆದ ವಾರ ನಾನು ಇದೇ ವಿಚಾರವಾಗಿ ಮಾತನಾಡಿದಾಗ ಹಲವರು ನನ್ನನ್ನು ಖಂಡಿಸಿದರು. ವಾಗ್ದಾಳಿ ನಡೆಸಿದರು. ನನ್ನ ಬಗ್ಗೆಯೇ ವಾರವಿಡಿ ಮಾತನಾಡಿದರು. ಈಗ ಡಾ. ಸಿಂಗ್ ವಿಡಿಯೋ ವೈರಲ್ ಆಗಿದೆ. ಅದರಲ್ಲಿ ಅವರು ದೇಶದ ಸಂಪತ್ತು ಪಡೆಯುವಲ್ಲಿ ಮುಸ್ಲಿಮರಿಗೆ ಮೊದಲ ಆದ್ಯತೆ ನೀಡಬೇಕು ಎಂದು ಹೇಳಿದ್ದಾರೆ. ಈಗ ಕಾಂಗ್ರೆಸ್ ನಾಯಕರು ಏನು ಹೇಳುತ್ತಾರೆ. ಈಗ ಸ್ಪಷ್ಟನೆ ನೀಡಿ ಎಂದು ನಾನು ಅವರಿಗೆ ಸವಾಲು ಹಾಕುತ್ತೇನೆ ಎಂದು ಮೋದಿ ತಿರುಗೇಟು ನೀಡಿದರು.

ಕೆಲವು ಮಾಧ್ಯಮಗಳು ಕೂಡಾ ರಾಜಸ್ಥಾನದಲ್ಲಿನ ನನ್ನ ಭಾಷಣವನ್ನು ಟೀಕಿಸಿದ್ದವು. ಈಗ ಅವು ಕೂಡಾ ಮೌನವಾಗಿವೆ ಎಂದು ಮೋದಿ ಕುಟುಕಿದರು.

ಕರ್ನಾಟಕದಲ್ಲಿನ ಕಾಂಗ್ರೆಸ್ ಸರಕಾರ ಇತರೆ ಹಿಂದುಳಿದ ವರ್ಗಗಳ ಮೀಸಲು ಸೌಲಭ್ಯವನ್ನು ಮುಸ್ಲಿಮರಿಗೆ ಕೊಡಲು ಮುಂದಾಗಿದೆ. ಇದರಿಂದಾಗಿ ಇತರೆ ಹಿಂದುಳಿದ ವರ್ಗಗಳ ಜನತೆಗೆ ಅನ್ಯಾಯ ಆಗುವುದಿಲ್ಲವೇ? ಈ ಬಗ್ಗೆ ಪ್ರತಿಪಕ್ಷಗಳ ಪ್ರತಿಕ್ರಿಯೆ ಏನು? ಒಬ್ಬ ಇತರೆ ಹಿಂದುಳಿದ ವರ್ಗಗಳ ವ್ಯಕ್ತಿಯಾಗಿ ನಾನೂ ಕೂಡಾ ಸಮುದಾಯದ ಕಷ್ಟವನ್ನು ಬಹಳ ಸಮೀಪದಿಂದ ಕಂಡಿದ್ದೇನೆ. ಕಾಂಗ್ರೆಸ್ಸಿನ ಕರ್ನಾಟಕ ಸರಕಾರ ಈಗ ಇತರೆ ಹಿಂದುಳಿದ ವರ್ಗಗಳ ಮೀಸಲು ಸೌಲಭ್ಯ ವನ್ನು ಕಿತ್ತುಕೊಂಡಿದೆ. ಮುಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲು ಸೌಲಭ್ಯವನ್ನು ಕಸಿದು ಮುಸ್ಲಿಮರಿಗೆ ಕೊಡುತ್ತದೆ.

– ನರೇಂದ್ರ ಮೋದಿ ಪ್ರಧಾನಿ

ಚುನಾವಣೆ ಚುರುಮುರಿ

ಪ್ರಚಾರದಲ್ಲಿ ಯಾರು ಏನೆಂದರು?

ವಿವಿ ಪ್ಯಾಟ್ ಮತ್ತು ಇವಿಎಂ ಮತಪತ್ರ ಹೋಲಿಕೆ ಮತ್ತು ಖಾತರಿ ವಿಚಾರದಲ್ಲಿ ಸುಪ್ರೀಂಕೋರ್ಟ್ ಶುಕ್ರವಾರ ನೀಡಿದ ತೀರ್ಪು ಈ ಹಿಂದೆ ಚುನಾವಣೆ ಗಳಲ್ಲಿ ಮತಗಟ್ಟೆ ಲೂಟಿ, ಮತ ಪೆಟ್ಟಿಗೆ ನಾಶ ಪಡಿಸುತ್ತಿದ್ದ ಪಕ್ಷದವರಿಗೆ ದೊಡ್ಡ ಹೊಡೆತ ಬಿದ್ದಿದೆ. ಮತ ಯಂತ್ರಗಳ ಬಳಕೆಯಿಂದ ಮತಗಟ್ಟೆ ಲೂಟಿ ಈಗ ತಪ್ಪಿದೆ. ಪ್ರತಿ ಮತ ಲೆಕ್ಕಕ್ಕೆ ಸಿಗುತ್ತದೆ. ನಕಲಿ ಮತದಾನಕ್ಕೆ ಆಸ್ಪದ ಇಲ್ಲದಂತೆ ಆಗಿದೆ. ಮತಗಟ್ಟೆ ಚೋರರಿಗೆ ಕಷ್ಟವಾಗಿದೆ. ಹಾಗಾಗಿಯೇ ಮತಯಂತ್ರ ಬಗ್ಗೆ ಜನರಲ್ಲಿ ಅನುಮಾನ ಮೂಡಿಸಬೇಕು ಎಂದೇ ಅವರು ಪ್ರಯತ್ನ ನಡೆಸಿ ಈಗ ಕೋರ್ಟನಲ್ಲಿಯೂ ಸೋತಿದ್ದಾರೆ.

– ನರೇಂದ್ರ ಮೋದಿ
ಪ್ರಧಾನಿ

ದೇಶದಲ್ಲಿನ ಬಲು ಗಂಭೀರ ವಿಷಯ ಗಳಿಂದ ಜನರ ಗಮನವನ್ನು ಬೇರೆ ಕಡೆಗೆ ಸೆಳೆಯಲು ಪ್ರಧಾನಿ ನರೇಂದ್ರ ಮೋದಿ ವೇದಿಕೆಯಲ್ಲಿ ಕಣ್ಣೀರು ಹರಿಸಲು ಬಲ್ಲರು. ಈಗ ಮತದಾರರ ಗಮನ ಸೆಳೆಯಲು ಮುಸ್ಲಿಮರಿಗೆ ದೇಶದ ಸಂಪತ್ತು ಹಂಚಿಕೆ ಮತ್ತು ಪಿತ್ರರ್ಜಿತಾ ಆಸ್ತಿಗೆ ತೆರಿಗೆ ಎಂಬ ವಿಚಾರವನ್ನು ಹಿಡಿದುಕೊಂಡು ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಯತ್ನಿಸಿದ್ದಾರೆ. ಅಂದರೆ ಅವರು ತಮ್ಮ ಉದ್ದೇಶ ಸಾಧಿಸಿ ಕೊಳ್ಳಲು ಕಣ್ಣೀರು ಸುರಿಸುತ್ತಾರೆ, ಏನು ಬೇಕಾದರೂ ಮಾತನಾಡುತ್ತಾರೆ.

– ರಾಹುಲ್ ಗಾಂಧಿ
ಕಾಂಗ್ರೆಸ್ ಮುಖಂಡ

ಕಾಂಗ್ರೆಸ್ ಪಕ್ಷದ್ದು ಮುಸ್ಲಿಂ ಲೀಗ್ ಕಾರ್ಯಸೂಚಿ ಆಗಿದೆ. ಮುಸ್ಲಿಮರನ್ನು ಮೆಚ್ಚಿಸುವ ಸಲುವಾಗಿ ಷರಿಯಾ ಕಾನೂನು ಜಾರಿಗೆ ತರಲು ಹಿಂಜರಿಯುವುದಿಲ್ಲ. ಇಂಥದೊಂದು ವೈಯಕ್ತಿಕ ಕಾನೂನು ದೇಶದಲ್ಲಿ ಜಾರಿಗೆ ಬರುವುದನ್ನು ಒಪ್ಪಬಹುದೇ? ಆದರೆ ಕಾಂಗ್ರೆಸ್ ಹೇಳುತ್ತಿದೆ, ಮುಸ್ಲಿಮರಿಗಾಗಿ ತಮ್ಮ ಪಕ್ಷ ಪ್ರತ್ಯೇಕ ಕಾನೂನು ಜಾರಿಗೆ ತರಲು ಸಿದ್ಧವಿದೆ ಎಂದು. ದೇಶ ಷರಿಯಾ ಕಾನೂನು ಪ್ರಕಾರ ಆಡಳಿತ ನಡೆಸಲು ಸಾಧ್ಯವೇ? ಕಾಂಗ್ರೆಸ್ ಪಕ್ಷ ದೇಶದಲ್ಲಿ ಮರಳಿ ತ್ರಿವಳಿ ತಲ್ಲಾಕ್ ಜಾರಿಗೊಳಿಸಲು ಸಿದ್ಧವಿದೆ. ಕಾಂಗ್ರೆಸ್ ಪೂರ್ಣ ಮುಸ್ಲಿಂ ಲೀಗ್ ಆಗಲು ಸಜ್ಜಾಗಿದೆ.

– ಅಮಿತ್ ಶಾ
ಕೇಂದ್ರ ಗೃಹ ಸಚಿವ

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಸಂಪತ್ತಿನ ಮರುಹಂಚಿಕೆ ಬಗ್ಗೆ ಎಲ್ಲಿ ಹೇಳಲಾಗಿದೆ? ನಾವೆಲ್ಲಿ ಮಂಗಳಸೂತ್ರ ಕಿತ್ತುಕೊಳ್ಳುತ್ತೇವೆ ಎಂದು ಹೇಳಿದ್ದೇವೆ? ಯಾರು ಮಂಗಳಸೂತ್ರಕ್ಕೆ ಗೌರವ ಕೊಡುವುದಿಲ್ಲವೋ, ಅವರೇ ಅದರ ಬಗ್ಗೆ ಮಾತಾಡುತ್ತಿದ್ದಾರೆ. ಮೋದಿ ಅಸತ್ಯಮೇವ ಜಯತೇಗೆ ಸಂಕೇತವಾಗಿದ್ದಾರೆ. ಅವರು ಸುಳ್ಳು ಹೇಳುವುದರ ಮೂಲಕ ದೇಶದ ಗಮನ ಬೇರೆಡೆ ಸೆಳೆಯಲು ಯತ್ನಿಸುತ್ತಿದ್ದಾರೆ.

– ಜೈರಾಂ ರಮೇಶ್,
ಕಾಂಗ್ರೆಸ್ ನಾಯಕ